SATYAVADI Oldest Newspaper of Mysore
Daily & Weekly Reg No. M 1299

ಸತ್ಯವಾದಿ

ಸಂಪುಟ 2ನೆ ಸಂಚಿಕೆ 295] ಮಂಗಳವಾರ 4—5—1943 [3 ನೆ

ರೋಡ್ಸ್ ದ್ವೀಪದಲ್ಲಿ ಜರ್ಮನರೇ?

ಮೆಡಿಟರೇನಿಯನ್ ಸಮುದ್ರದಲ್ಲಿ ತುರ್ಕಿಗೆ ದಕ್ಷಿಣದಲ್ಲಿ ಕೀಟ್‌ಗೆ ಉತ್ತರದಲ್ಲಿ ಸೈಪ್ರಸ್‌ಗೆ ಪಶ್ಚಿಮದಲ್ಲಿರುವ ಇಟಲಿಯವರ ರೋಡ್ಸ್ ದ್ವೀಪವನ್ನು ಜರ್ಮನಿಯವರು ತಮ್ಮ ಅಧಿಕಾರಕ್ಕೆ ತೆಗೆದುಕೊಂಡು ಸೈನ್ಯಗಳನ್ನೂ ಯುದ್ಧದ ಸಲಕರಣೆಗಳನ್ನು ತುಂಬಿರ ತ್ತಾರೆಂದು ಹೇಳಲಾಗಿದೆ.

ನ್ಯೂಯಾರ್ಕಿನ ಮೇಲೆ ವಿಮಾನ!

ನ್ಯೂ ಯಾರ್ಕಿನಲ್ಲಿ ವಿಮಾನಧಾಳಿ ಎಚ್ಚರಿಕೆ ಮುಗಿದ ಹತ್ತು ನಿಮಿಷದ ಮೇಲೆ ಬ್ರೂಕ್ಲಿನ್ನಿನಲ್ಲಿ ಒಂದು ಗೊತ್ತಿಲ್ಲದ ವಿಮಾನವು 4 ಮೈಲ್ ಗಳ ಹಾರಿಸಿತು. ಒಂದು ನಿಮಿಷ ಚಾತಣಿಯನ್ನು 3 ಹೆಲ್ಲು ಕೊರೆಯಿತೆಂದೂ ಇದೊಂದು ಜನಘಟಕವಾದ ಚೌಕದಲ್ಲಿ ಬಿತ್ತೆಂದೂ ಪೋಲೀಸಿನವರು ಈ ಫೋಟೋ ತೆಗೆದಿರುವರೆಂದೂ ತಿಳಿಯುಬಂದಿದೆ.

ಯುದ್ಧ ಬೇಗ ಮುಗಿಯುವುದೇ ?

ಈ ಯುದ್ಧವು ಬೇಗ ಮುಗಿಯುವುದೆಂದು ಸ್ವೀಡಿಷ್ ಪ್ರಧಾನ ಮಂತ್ರಿಯು ಅಭಿಪ್ರಾಯ. ಕೆಲಸಗಾರರಿಗೆ ಜನರಲ್ ಜಿರೋರವರು ಮುಂದಿನ ವರ್ಷ ಯುದ್ಧವು ಮುಗಿಯುವುದೆಂದು ಹೇಳಿದರು.

ಯುದ್ಧವಾರ್ತೆ

ರಷ್ಯಾದ ಕಾಕಸಸ್ಸಿನಲ್ಲಿ ಉಗ್ರ ಕದನವಾಗುತ್ತಿದೆ. ಕ್ಯೂಬನ್ನಿನಲ್ಲಿ ರಷ್ಯನ್ನ ಪ್ರಾರಂಭವಾಗಿದೆ. ನೊವೊರೊಸಿಸ್ಕಿನ ಬಳಿ ಜರ್ಮನರು ಧಾಳಿಗೆ ಪ್ರಾರಂಭಿಸಿರುವರು. ಜಕೆಂ ಬಳಿ ರಷ್ಯನರಿಗೆ ಲಾಭವಾಗಿದ್ದು ಸ್ಟೇ ಹತ್ತಿರ ಜರ್ಮನರ ತಾಣ್ಯಗಳು ನಾಶವಾಗಿವೆ.

ಜರ್ಮನಿಗೆ ತುರ್ಕಿ ಮೇಲೆ ವಕ್ರದೃಷ್ಟಿ ಬಿದ್ದಂತೆ ಕಾಣುತ್ತೆ.

ಬರ್ಮಾದಲ್ಲಿ ಮಾಂಡಲೇ ರೈಲ್ವೇರಸ್ತೆಗಳಿಗೆ ಅಮೆರಿಕನ್ ವಿಮಾನಗಳು ಧಾಳಿ ನಾಡಿದವು. ಪಾಹಿನ್ ಪ್ರದೇಶದ ಮತ್ತು ಕ್ವೈಮಿ ಎಣ್ಣೆಗಣಿಗಳು ನಾಶವಾದವು.

ಸಾಲೋನಿಕಾ ಮೆಸಿಡೋನಿಯಗಳಲ್ಲಿ ಜರ್ಮನರು ಕೋಟೆಕೊತ್ತಲುಗಳನ್ನು ನಿರ್ಮಿಸಿ ಬಲಪಡಿಸುತ್ತಿರುವರೆಂದು ತಿಳಿಯಬರುತ್ತೆ.

ಟ್ಯೂನಿಸ್ ಸಧ್ಯದಲ್ಲೇ ಮಿತ್ರಪಕ್ಷದವರ್ವಶವಾಗುವಂತಿದೆ.

ವೋರ್ಟ್ ಡಾರ್ನಿನ್ನಿಗೆ ಜಪಾನೀಯರು ಧಾಳಿ ಮಾಡಿ 13 ವಿಮಾನಗಳನ್ನು ಕಳೆದುಕೊಂಡರು.

ವರ್ತಮಾನ ಸಂಗ್ರಹ

ಬೈಲ್ವೆ ನೌಕರರ ಉಪಯೋಗಕ್ಕೆ 10 ಲಕ್ಷ ಗಜ ಕಮ್ಮೀ ದರದ ಬಟ್ಟೆಯನ್ನು ಕೊಡುವರೆಂದು ತಿಳಿಯುಬಂದಿದೆ.

ಅಮೆರಿಕಾದಲ್ಲಿ ಪ್ರತಿ 1000 ಸೈನಿಕರಿಗೆ 8 ಮಂದಿ ಡಾಕ್ಟರುಗಳು.

ಕಾಂಕಾಂಗಿನಲ್ಲಿದ್ದ ಚರ್ಚಿನ ಬಾಸ್ಕೀ ಗಡಿಯನ್ನಾಗಿ ಮಾಡಿದಂತೆ

ಇದುವರಿಗೆ ಮದರಾಸಿನಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ವಿಚಾರಣೆಯಿಲ್ಲದೆ 644 ಮಂದಿ ಜೈಲಿನಲ್ಲಿರುವರು.

ಬ್ರಿಟನ್ನಿನಲ್ಲಿ ಬ್ರಿಟಿಗೆ ಕ್ವಾಮಿ ಒಂದಿದ್ದರಿಂದ ಅಮೇರಿಕಾದಿಂದ ಆಮದು ಮಾಡಿಕೊಂಡಿರುವರು.

ರೂರ್ ಪ್ರಾಂತ್ಯವನ್ನು ಜರ್ಮನಿಕೈ ಯಿಂದ ತಪ್ಪಿಸಿಡಲು ಜರ್ಮನಿಯು ಯುದ್ಧ ಮಾಡಲಾರಾಂದು ಎಂದು ಕೆಂಟರ್ಬರಿಯ ಆರ್ಚಿಬಿಷಪ್‌ರವರು ಹೇಳುವರು.

ಅಮೆರಿಕಾದ ವಿಮಾನ ದಳದವರನ್ನು ಜಪಾನಿಗಳು ಕೊಂದಹಾಗೆ ಇಟಲಿಯವರು ಮಾಡಲಾರರೆಂದು ಕಾರ್ಡಿನಲ್ ಹಲ್ ರವರು ಹೇಳಿರುತ್ತಾರೆ.

ಫಿನ್‌ಲೆಂಡ್ ಇದೇ 4 ರಲ್ಲಿ ಸ್ವೀಡಿಷ್ ಮುಖಾಂತರ ರಾಜಿ ಮಾಡಿಕ್ಕೊಳ್ಳುವುದಾಗಿ ರಷ್ಯಾಕ್ಕೆ ಹೇಳಿಕಳುಹಿಸಿತೆಂದು ಬಿಬಿಸಿ ವಾರ್ತಾಪತ್ರಿಕೆಗಳು ಅಮೆರಿಕಾದ ಒಂದು ಪತ್ರಿಕೆಗೆ ಬರೆಯುತ್ತಾರೆ.

ಹಿಟ್ಲರಿನ ಸಂಗಡ ಸಂಭಾಷಣೆ ನಡೆಸಿ ಫ್ರಾನ್ಸಿಗೆ ಹಿಂತಿರುಗಿದಾಗ ಲಾವಲರವರಿಗೆ ಭುಜದ ಮೇಲೆ ಪೆಟ್ಟು ಬಿದ್ದಿತ್ತು. ಲಾವಲರವರು ಕಣಕಾಸಿನ ಮಂತ್ರಿಯಾಗಿದ್ದ ಪೆರಕ್ಷಥಾನಾರವರಿಗೆ ತುಂಬಾ ಗಾಯಗಳಾಗಿವೆ. ಇವರು ತಂಗಿದ್ದ ಹೋಟಲಾ ವಷ್ಟಿಗೆನ್ನಿನಲ್ಲಿ ಯಾರೋ ಬಾಂಬು ಎಸೆದರೆಂದು ಹೇಳಲಾಗಿದೆ.

ನೊರಾರಾಬಾದಿನ ಒಂದು ಗೋರಿಯಲ್ಲಿ ಒಂದು ಶರೀರ ಶಬ್ದ ಕೇಳಿಬರುತ್ತಿದೆ. ಇದನ್ನು ಅಲ್ಲಿಯವರು ಕೇಳಿ ಆಶ್ಚರ್ಯ ಪಡುತ್ತಿರುವರು ಕಾರಣವೇ ಸಿಂಬಂದು ಇನ್ನೂ ಯಾರಿಗೂ ಗೊತ್ತಿಲ್ಲ. ಈ ಗೋರಿಯು ಈಗ್ಗೆ ನಾಲ್ಕು ವರ್ಷಗಳಿಂದ ಇದೆ.

ಎಲ್ಲೆಲ್ಲಿ ಏನೇನು ?

ಸಂಯುಕ್ತ ಪ್ರಾಂತ್ಯದ ವೈಜ್ಞಾನಿಕರು ಒಂದು ವರ್ಷ ಕಷ್ಟಪಟ್ಟು ಕೈನಾ ಒದಲು ಮತ್ತೊಂದನ್ನು ಕಂಡುಹಿಡಿದಿದ್ದಾರೆ, ಇದರ ಹೆಸರು ಮೆಪಕೈನ್; ಇದಕ್ಕೆ ಅಮೆರಿಕಾದಲ್ಲಿ ಅಟಿಬ್ರಿನ್ ಎಂಬ ಹೆಸರ. 1 ವರ್ಷಕ್ಕೆ 50 ಲಕ್ಷ ಗುಳಿಗೆಗಳನ್ನು ತಯ್ಯಾರ್ಮಾಡುವರು.

ಒಬ್ಬ ಎ. ಆರ್. ವಾರ್ಡನ್ ತಾನು ಮದುವೆಯಾಗಲಿದ್ದ ವಳಿಗೆ ಒಂದೂವರೆ ಮಣ ಗೋಧಿಯನ್ನು ರಿಕ್ವಾದಲ್ಲಿ ಕಳುಹಿಸುತ್ತಿರುವಾಗ ದಾರಿಯಲ್ಲಿ ಪೊಲೀಸಿನವರಿಂದ ಪತ್ತೆಯಾಗಿ, ಲಗ್ನವಾಗುವ ಒದಲು ಜೈಲಿಗೆ ಹೋಗಬೇಕಾಯಿತು.

ಉತ್ತರ ಅಮೇರಿಕಾದಿಂದ ಯೂರೋಪಿಗೆ ಬರುವ ನೌಕೆಯನ್ನು ಕಾಯಲು ಪ್ರತಿಯೊಂದು ಬೈಲಿಯಲ್ಲಿಯೂ ಬ್ರಿಟಿಷ್, ಕೆನಡಿಯನ್, ಅಮೆರಿಕನ್ ನಾವೆಗಳೂ, ವಿಮಾನಗಳೂ ಕಾವಲಿಡಲಾಗುವುದಾಗಿ ಮಿತ್ರಪಕ್ಷದವರು ಏರ್ಪಾಡು ಮಾಡುತ್ತಿರುವರು.

ಆಹಾರ ಸಮಸ್ಯೆಯನ್ನು ವ್ಯವಸ್ಥೆ ಮಾಡಲು ಇಂಡಿಯಾ ಸರಕಾರದವರು 6 ಮಂದಿ ಫುಡ್ ಕಮಿಷನರನ್ನು ನೇಮಕ ಮಾಡಿರುತ್ತಾರೆ. ಇವರು ಈಗ ಅವರವರ ಪ್ರಾಂತ್ಯಗಳಲ್ಲಿ ಸಂಚರಿಸುತ್ತಾ ವಿಷಯುಗಳನ್ನು ವಂದಿಟ್ಟುಮಾಡಿಕೊಳ್ಳುತ್ತಲಿರುವರೆಂದು ತಿಳಿಯುಬಂದಿದೆ.

ಪುಸ್ತಕಕ್ಕೆ ಬಹಿಷ್ಕಾರ

ಈಗ ಎರಡು ತಿಂಗಳ ಕೆಳಗ ಇಂಗ್ಲೆಂಡಿನಲ್ಲಿ ಜೈನಾ ರಾಯಭಾರಿಯಾಗಿರುವ ಶ್ರೀಮತಿ ವೆಲ್ಲಿಂಗ್‌ಟನ್ ಕೂರವರು, ಜೈನಾಕ್ಕೆ ತಕ್ಷಣವೇ ಮದ್ದಗುಂಡು, ಆಹಾರ ಕಳಿಸದಿದ್ದರೆ ಜೈನಾವು ಮುಳುಗಿ ಹೋಗುವುದು ಎಂದು ಹೇಳಿದ್ದರಷ್ಟೆ. ಇದು 2 ದಿನಗಳ ಹಿಂದೆ ಜಕರಿಗೆ ಕೊಡಲ್ಪಡಬೇಕಾಗಿತ್ತು. ಈಗಾಗಲೇ ಈ ಪುಸ್ತಕವನ್ನು ಪುಸ್ತಕ ವ್ಯಾಪಾರಿಗಳಿಗೆ ಹಂಚಲಾಗಿದೆ ಇದನ್ನು ನೂರಾರಹಾಗೆ 6000 ತುತೀವರ್ತಮಾನಗಳು ವರ್ತಕರಿಗೆ ಕಳಿಸಿರುತ್ತಾರೆ ತಿದ್ದುಪಡಿಯಾದ ಪುಸ್ತಕವು ಸಧ್ಯದಲ್ಲೇ ಪ್ರಕಟವಾಗುವುದು. ಅಮೇರಿಕಾ ಸರಕಾರದವರು ಕೈಹಾಕಿದ್ದರಿಂದ ಹೀಗೆ ಮಾಡಬೇಕಾಯಿತು.

ಕೋರಿಯಾದಿಂದ ಜಪಾನಿಗೆ ಸುರಂಗ ಮಾರ್ಗ

ಸೈನಿಕರ ಅಭಾವದಿಂದ ಜಪಾನಿಯರು ಕೊರಿಯಾದಿಂದ ಸೈನ್ಯವನ್ನು ಕಳಿಸಲಿಕ್ಕಾಗದೆ ಬಹಳ ತೊಂದರೆಪಡುತ್ತಿದ್ದರು. ಕೈಹಾಕೋಸಫ್ ದ್ವೀಪಗಳು ಈಗ ಸಮುದ್ರದಲ್ಲಿ ಸುರಂಗ ಮಾರ್ಗ ಮಾಡಿರುವರು. ಕೊರಿಯಾಕ್ಕೂ ಜಪಾನಿಗೂ 120 ಮೈಲಿ ಸಮುದ್ರದಲ್ಲಿ ಸುರಂಗ ಮಾರ್ಗ ಮಾಡುವರಂತೆ. ಇಂಜಿನಿಯರ್‌ಗಳಿಂದ ತಿಂಗಳಿಗೊಂದು ಹೊಸದಾಗಿ ರೈಲ್ವೆಮಾರ್ಗಗಳು ಇಲ್ಲದ ಕಡೆಗಳಲ್ಲಿ ಹೊಸದಾಗಿ ನಿರ್ಮಾಣಮಾಡುವರು

ಬಣ್ಣದ ಮನುಷ್ಯರ ಹಾಡು

ಕಳೆದ ವಾರ ಲಂಡನ್ನಿನಲ್ಲಿ ಒಂದು ಸಭೆ ನೆರೆದಿತ್ತು. ಈಗಲೆಲ್ಲಾ ಕಪ್ಪು ಮನುಷ್ಯನನ್ನು ತುಳಿಯಬೇಕೆಂದಿರುವವರನ್ನು ಖಂಡಿಸುವುದೇ ಈ ಸಭೆಯ ಉದ್ದೇಶವಾಗಿತ್ತು. ಇದಕ್ಕೆ ಚೇರ್‌ಮನ್ ಮಿ|| ಒಟೊ ಇಂಗ್ಲೆಂಡಿನಲ್ಲಿ ಹೆಸರುವಾಸಿಯಾದ ಗ್ರಂಥಕರ್ತರು. ಇಂಗ್ಲೆಂಡಿನಲ್ಲಿ ಟ್ಯಾಗೂರ್ ಸೊಸೈಟಿಯಿಂದ ಹಿಂದೂಸ್ಥಾನ ಪ್ರತಿನಿಧಿಯಾಗಿ ಶ್ರೀಮಾನ್ ಬಿ. ಜಿ. ಹಾನುಚಂದ್ರರವರನ್ನು ಕಳುಹಿಸಿದ್ದರು. ಇವರು ದಕ್ಷಿಣ ಆಫ್ರಿಕಾದ ಸದ್ವಿಯನ್ನು ಮಾತನಾಡಲು ಮಿ||ಒಟರವರು ಅವಕಾಶ ಕೊಡಲಿಲ್ಲವು ಈ ಸಭೆಯು ಯೂರೋಪಿನಲ್ಲಿ ಒಣ್ಣದ ಮನುಷ್ಯರಿಗೆ ಕೊಡುತ್ತಿರುವ ತೊಂದರೆಯನ್ನು ತಪ್ಪಿಸಲು ಏರ್ಪಾಡಾಗಿರುವುದೇ ವಿನಃ ಆಫ್ರಿಕಾದ ವಿಷಯ ಮಾತನಾಡಕೂಡದೆಂದರು

ಹಿಂದೂಸ್ಥಾನ್ ವಿಭಾಗವಿಲ್ಲ

ಕರಾಚಿಯಲ್ಲಿ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಲಾಹೋರ್ ಲಾಲಾ ಕುಳ್ಳ ಚಂದ್ರವರು, ಪಾಕಿಸ್ತಾನ್ ಎಂಬುದು ಗಾಳಿಯ ಗೋಪುರದಂತೆ, ಅಖಿಲ ಭಾರತ ಅದೂ ಹೀಗೆಯೇ ? ಪಾಕಿಸ್ತಾನ್ 1932 ರಲ್ಲಿ ರೌಂಡ್ ಟೇಬಲ್ ಕಾನ್ಫರೆನ್ಸ್‌ನಲ್ಲಿ ಜನ್ಮತಳೆದಿತ್ತು. ಆಗ ನಿಂದಲೂ ಗಲಾಟೆ ಆಗುತ್ತಲೇ ಇದೆ. ಹಿಂದೂಗಳು ಹಿಂದೂಸ್ಥಾನವನ್ನು ವಿಭಾಗ ಮಾಡಲು ಬಿಡಕೂಡದು ಕೊನೆಗೆ ಒಬ್ಬನು ಒಂದು ಮನಿ ರಕ್ತವಿರುವವರೆಗೂ ಪಾಕಿಸ್ತಾನನ್ನು ಎದುರಿಸಬೇಕೆಂದೂ ಸಹ ಹೇಳಿದರು.

ಶೃಂಗಾರ ಬೆಳ್ಳಿ ಧಾರಣೆ

ಸವರ್	ರೂ.	70–4–0
ಒಂಗಾರ ತೊಲ	ರೂ.	98–0–0
ಬೆಳ್ಳಿ ,,		1–6–6

ವರ್ತಮಾನ

ಬೊಂಬಾಯಿನಲ್ಲಿ ಟೆಲಿಫೋನ್ ಸೆಟ್ಟುಗಳು ಸಿಗದೆ ಬಹಳ ತೊಂದರೆಯಾಗಿದೆ. ಬೇಕಾದವರು ವೃತ್ತಪತ್ರಿಕೆಗಳಲ್ಲಿ ಯಾರಿಗೆ ಬೇಡವೋ ಅದನ್ನು ಬೇಕಾದವರ ಹೆಸರಿಗೆ ಬದಲಾಯಿಸಿದರೆ ಅದಕ್ಕೆ ಕಮಿಷನ್ ಇತ್ಯಾದಿ ಸಿಗುವುದೆಂದು ಪ್ರಕಟಿಸಿದ್ದಾರೆ.

ಜನರಲ್ ಚಿರೋರವರು ಜನರಲ್ ಡಿಗಾಲ್‌ರವರನ್ನು ಇದೇ ಮೇ ತಾ|| ೧೬ ನೇ ಬುಧವಾರ ಅಲ್ಜಿಯರ್ಸ್‌ನಲ್ಲಿ ಭೇಟಿಮಾಡುವರೆಂದು ತಿಳಿಯಬಂದಿದೆ.

ಭಾರತಕ್ಕೆ ಬಂದಿದ್ದ ಚೀನಾ ವೈದ್ಯ ನಿಯೋಗಿಯವರು ಚುಂಕಿಂಗಿಗೆ ವಾಪಸ್ ತಲಪಿದರು.

ಟ್ಯುನಿಷಿಯಾ ರಣರಂಗಸೋಡಲು ಮಿ || ಜಮ್ನಾದಾಸ್ ಮೇಥಾರವರು ಈಗ ಕಂಚಿಗೆ ಹೋಗಿರುವರು.

ಪೂಕಿಫಿರಿ ಎಂಬ 70 ವರ್ಷದ ಮೋರಿಪುಟ್ಟದ ರಾಜನು "ಮನುಷ್ಯನಾದವನು ಬದುಕುವುದಕ್ಕಿಂತ ಸಾಯುವುದೇ ಮೇಲು" ಎಂದು ಹೇಳಿ ಕಾಡಿಗೆ ಹೋಗಿ ಸೇಣಸಾಹಿಕೊಂಡು ಪ್ರಾಣಬಿಟ್ಟನು.

ರಷ್ಯಾದಲ್ಲಿ ಹಿಮಕರಗಿ ನೆಲವೆಲ್ಲಾ ಕೊಚ್ಚೆಯಾಗಿದೆ. ಯುದ್ಧ ಹೂಡಲು ಯಾರಿಗೂ ಆಗುವುದಿಲ್ಲ ರಷ್ಯಾ ಏರೋಪ್ಲೇನುಗಳು ಧಾಳಿಯನ್ನು ಮಾತ್ರ ಏಕ ಪ್ರಕಾರವಾಗಿ ಮಾಡುತ್ತಿವೆ. ಕೊಚ್ಚೆಯೆಲ್ಲಾ ಕಳೆಯುವವರೆಗೂ ಉಭಯತ್ರರೂ ಸನ್ನಾಹ ಮಾಡಿಕೊಳ್ಳುತ್ತಿರುವರು.

ಇದುವರೆಗೂ ಮೇ ತಿಂಗಳು 1 ರಲ್ಲಿ ಮೇ ದಿವಸವು ಪ್ರಪಂಚದಲ್ಲಿನ ಕೂಲಿಗಾರರಿಂದ ಮಾತ್ರ ಆಚರಿಸಲ್ಪಡುತ್ತಿತ್ತು. ಈಗ ಪ್ರಪಂಚದ ಕೂಲಿಗಾರರೇ ಒಟ್ಟಾಗಿರಿ ಎನ್ನುವುದಕ್ಕೆ ಒದಲು. ಪ್ರಪಂಚದ ಜನಾಂಗದವರೇ ಒಟ್ಟಾಗಿರಿ. ಎನ್ನುವ ಹಾಗಾಗಿಯಿತು.

ಸರ್ಕಾರಿ ನೌಕರರು ಸ್ಟೇಷನರಿ ಸಾಮಾನು, ಪ್ರಿಂಟಾದ ಫಾರಂ ಮುಂತಾದವನ್ನು ಹೆಚ್ಚಾಗಿ ಉಪಯೋಗಿಸಿದರೆ ಶಿಕ್ಷೆಗೆ ಗುರಿಯಾಗುತ್ತಾರೆಂದು ಅನಂತಶಯನಸರಕಾರದ ಆಜ್ಞೆಯಾಗಿದೆ.

ಅನೇರಿಕಾದ ಕಲಿಜ್ಜಲು ಮುಷ್ಕರವು 2 ವಾರದ ವರೆಟ್ಟಿಗೆ ನಿಂತಿದೆ. ಅಷ್ಟರಲ್ಲಿ ಸರಕಾರವು ವ್ಯವಸ್ಥೆಮಾಡುವುದು.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕಂಠೀಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ಎ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ಕಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಿಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.

ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು.

For All Kinds of
Printing & Binding

The Satyavadi Press

Chamarajapuram
Mysore

ಶಕ್ತಿ ಸಾಧನೆಗೆ
ಸುಲಭೋಪಾಯವು

ಶಕ್ತಿ ಸುಧಾ

ಸೇವನೆ ಎಂಬುವುದು
ನಿಮ್ಮ ಜ್ಞಾಪಕದಲ್ಲಿರಲಿ

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ

ಅಕ್ಕರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕಾದ ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

SHAKTI SUDHA

A Panacea for All Debilites

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Opera – Saheli
ಅಪೆರಾ ಸಹೇಲಿ
(ಒಂದೀಭಾಷೆ)

ಪಹರಿನಾಯಲ್, ರತ್ನಾಬಾಯಿ, ಪ್ರಮಿಳ
ಯಾಕೂಬ್ ಮುಂತಾದವರು
ನಟಿಸಿರುವರು

ಪಿ. ಮಂಜಪ್ಪ ಮಲ್ಲೇಶ್ವರಂ
ಸರ್ಕಲ್ ಆಫೀಸಿನ ಹತ್ತಿರ. ಮೈಸೂರು.
ಇವರಲ್ಲಿ 'ಸತ್ಯವಾದಿ' ಸಿಗುವುದು

Edited, Printed & published by M. S. Krishna Rao, at the Satyavadi Press. Chamaraja Agraharam, Mysore.